### ಅದ್ಭುತ ಹಾಡುಗಾರ

‘ಸೆಲೆಬ್ರಿಟಿ’ ಅಂಕಣದಲ್ಲಿ (ಸೆ. 2ರ ಸಂಚಿಕೆ) ಪ್ರವೀಣ ಕುಲಕರ್ಣಿ ಅವರು ಇಂಡಿಯನ್ ಐಡಲ್ ಸ್ಪರ್ಧೆಯ ವಿಜಯಶಾಲಿ ಪವನ್ ದೀಪ್‌ರಾಜನ್ ಅವರ ಬಗ್ಗೆ ಬರೆದ ಲೇಖನ ಓದಿ ತುಂಬ ಖುಷಿಯಾಯ್ತು. ಆದರೆ ನಮ್ಮ ಕನ್ನಡದ ಹುಡುಗ, ಮಂಗಳೂರಿನ ನಿಹಾಲ್ ತಾವ್ರೊ ಬಗ್ಗೆ ಪ್ರಸ್ತಾಪ ಇಲ್ಲದಿರುವುದು ನೋಡಿ ಬಹಳ ಬೇಜಾರಾಯಿತು.

—ಮಾಧುರಿ ಅರುಣ್‌ಕುಮಾರ್

ಈ ಕಾರ್ಯಕ್ರಮ ಆರಂಭವಾದಾಗಲೇ ಈತನೇ ಈ ಬಾರಿಯ ಚಾಂಪಿಯನ್ ಎಂದು ನಾನು ಗುರುತಿಸಿ ಆಗಿತ್ತು. ಈತ ಹೃದಯ ತುಂಬಿ ಹಾಡುವಾಗ ನನಗೆ ಹುಚ್ಚೇ ಎದ್ದಿತ್ತು. ಕೇಳುಗರಾದ ನಮಗೆ ಎಂದೂ ಆತ ನಿರಾಶೆಗೊಳಿಸಲೇ ಇಲ್ಲ. ಈ ಬಾರಿಯೂ ಉತ್ತಮ ಸಂಗೀತವೇ ಗೆದ್ದಿದೆ ಎಂದು ನನ್ನ ಅನಿಸಿಕೆ. ಇಂಥ ಗಾಯಕರು ಇರುವಾಗ ಭಾರತೀಯ ಸಂಗೀತ ನಿಜಕ್ಕೂ ಅಜರಾಮರ.

—ಪಿ. ವಾಸುದೇವ್ ಭಟ್, ಬುಡ್ನಾರುಡುಪಿ

### ನಾಯಿಪಾಠ

ಕೆ. ಪಿ. ಮಂಜುನಾಥ್ ಅವರ ‘ನಾಯಿ ಪಾಠ’ (ಸೆ. 2)ಪ್ರಬಂಧ ನಗೆ ತರಿಸಿತು. ಕೆಲವೊಮ್ಮೆ ಬೇರೆ ಬೇರೆ ಏರಿಯಾದ ಬೀದಿನಾಯಿಗಳು ಮುಖಾಮುಖಿಯಾದಾಗ ರಣರಂಗವನ್ನೇ ಸೃಷ್ಟಿಸುತ್ತವೆ. ಸ್ವಲ್ಪ ಠಾಕುಠೀಕು ವ್ಯಕ್ತಿಗಳಿಗೆ ಗೌರವ ಕೊಡುತ್ತವೆ; ಹಾಗೆಯೇ ಸುಮಾರಾದ ವೇಷ, ಭೂಷಣದವರನ್ನು ನೋಡಿ ಕಳ್ಳಕಾಕರನ್ನು ನೋಡಿದ ಹಾಗೆ ಬೊಗಳುತ್ತವೆ. ಈ ನಾಯಿಗಳ ಸೈಕಾಲಜಿಯೇ ವಿಚಿತ್ರ!

—ಟಿ. ಎಸ್. ಪ್ರತಿಭಾ, ಚಿತ್ರದುರ್ಗ

### ಮಳೆಗಾಲಕ್ಕೆ ಮಾಗೋಡು

ಸೆ.2ರ ಸಂಚಿಕೆಯಲ್ಲಿ ಗ.ಮ. ತುಂಬೇಮನೆ ಬರೆದಿರುವ ‘ಮಳೆಗಾಲಕ್ಕೆ ಮಾಗೋಡು’ ಕಿರು ಲೇಖನ ತುಂಬಾ ವರ್ಣಮಯವಾಗಿದೆ. ಇದನ್ನು ಓದಿದ ಮೇಲೆ ಒಮ್ಮೆಯಾದರೂ ಅಲ್ಲಿಗೆ ಹೋಗಿಬರಬೇಕೆಂದು ಆಸೆಯಾಯಿತು. ಹಾಗೆಯೇ ಸಿ.ಎನ್. ರಾಮಚಂದ್ರನ್ ಬರೆದಿರುವ ‘ಬಿಗ್ ಬಾಸ್: ಸಿಂಡ್ರೆಲಾ ಕನಸುಗಳ ಸಾಕಾರಶಕ್ತಿ’ ಲೇಖನ ತುಂಬಾ ಚೆನ್ನಾಗಿದೆ. ಅವರು ಹೇಳಿದಂತೆ ದೈಹಿಕ ಟಾಸ್ಕ್‌ಗಳಿಗಿಂತ ಭಾಷಾ ಸಾಹಿತ್ಯ ಹಾಗೂ ಕರ್ನಾಟಕದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಿರುವ ಅಪ್ರತಿಮ ಕಲಾವಿದರ ಬಗ್ಗೆ ಕಾರ್ಯಕ್ರಮಗಳನ್ನು ಮಾಡಿದರೆ ಇನ್ನೂ ಹೆಚ್ಚು ವೀಕ್ಷಕರನ್ನು ಗಳಿಸುವಲ್ಲಿ ಸಂದೇಹವಿಲ್ಲ.

—ಮಧುಮತಿ ಅಭಿಷೇಕ್, ಚಿತ್ರದುರ್ಗ



### ಪ್ರವಾಸ ಪ್ರಯಾಸ

ಗುರು ಪಿ. ಎಸ್. ಅವರು ಸೆ. 2ರ ಸಂಚಿಕೆಯಲ್ಲಿ ಬರೆದಿರುವ ಮುಖಪುಟ ಲೇಖನ ‘ಪ್ರವಾಸ ಪ್ರಯಾಸ’ ಅತ್ಯುತ್ತಮ ಮಾಹಿತಿಗಳಿಂದ ಕೂಡಿದೆ. ಒಂದು ಕಾಲದಲ್ಲಿ ಪ್ರವಾಸೋದ್ಯಮ ಆಯಾ ರಾಜ್ಯಗಳ ಸರ್ಕಾರಕ್ಕೆ ಪ್ರಮುಖ ಆದಾಯಮೂಲವಾಗಿತ್ತು. ಕಳೆದೆರಡು ವರ್ಷಗಳಿಂದ ಅತಿವೃಷ್ಟಿ, ಕೊರೊನಾ ಲಾಕ್‌ಡೌನ್ ಮುಂತಾದ ಕಾರಣಗಳಿಂದಾಗಿ ಪ್ರವಾಸಿ ಸ್ಥಳಗಳು ಸೇರಿದಂತೆ ಅನೇಕ ದೇವಸ್ಥಾನಗಳು ಬಂದ್ ಆಗಿರುವುದರಿಂದ ಪ್ರವಾಸೋದ್ಯಮವನ್ನೇ ನಂಬಿಕೊಂಡಿದ್ದ ಅದೆಷ್ಟೋ ಜನರಿಗೆ ಜೀವನ ನಡೆಸುವುದೇ ಕಷ್ಟಕರವಾಗಿದೆ.

—ಎಚ್. ಆರ್. ವಸ್ತ್ರದ, ಧಾರವಾಡ

‘ಪ್ರವಾಸ ಪ್ರಯಾಸ’ದಲ್ಲಿ ಜೋಗ ಜಲಪಾತ ನೋಡಿ ನನ್ನ ಬಾಲ್ಯವನ್ನು ಈ ಪ್ರದೇಶದಲ್ಲಿ ಕಳೆದ ನೆನಪಾಯಿತು. ಜೋಗ ಭೋರ್ಗರೆಯುತ್ತಿದೆ, ಬಣ್ಣದ ಕೊಡೆಗಳ ಸುಳಿವಿಲ್ಲವಷ್ಟೆ ಎಂದು ಓದಿ ಬೇಸರವಾಯಿತು.

—ಡಾ. ಶೀಲಾ,ಬೆಂಗಳೂರು

ಸೆ.2ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನ ‘ಮನಮೋಹಕ ಸಂಡೂರು’ (ಲೇ:ಸ್ವರೂಪಾನಂದ ಎಂ. ಕೊಟ್ಟೂರು) ಮನಸ್ಸಿಗೆ ಮುದನೀಡಿತು. ಬೆಟ್ಟಗಳನ್ನು ಮುತ್ತಿಕ್ಕಿ ಸಾಗುವ ಮೋಡಗಳ ವರ್ಣನೆ ಮನಮೋಹಕವಾಗಿದೆ. ಮಂಗಳೂರಿನಿಂದ ಬಂದು ಸಂಡೂರಿನಲ್ಲಿ ನೆಲೆಸಿ ಎರಡು ವರ್ಷಗಳೇ ಕಳೆದಿವೆ. ದಿನ ಬೆಳಗಾದರೆ ಇಲ್ಲಿನ ಪ್ರಕೃತಿ ಮಾತೆಯ ಸೊಬಗನ್ನು ಸವಿಯುವ ಭಾಗ್ಯ ನಮ್ಮದು.

—ಜಿ.ನಾಗೇಂದ್ರ, ಸಂಡೂರು

### ಆಮ್‌ಸ್ಟರ್‌ಡ್ಯಾಂ ಡಂಜನ್

ಸೆ.2ರ ಸಂಚಿಕೆಯಲ್ಲಿ ಪದ್ಮಾ ಕಾವೂರು ಬರೆದ ಆಮ್‌ಸ್ಟರ್‌ಡ್ಯಾಂ ಡಂಜನ್ ಎಂಬ ಹೆಸರಿನ ಲೇಖನ ನನ್ನ ಮನಸ್ಸನ್ನು ಕಲಕಿತು. ಮಧ್ಯಕಾಲೀನ ಯುರೋಪಿಯನ್ ನ್ಯಾಯಾಲಯಗಳು ಅಪರಾಧಿಗಳಿಗೆ ನೀಡುತ್ತಿದ್ದ ಶಿಕ್ಷೆ ಎಂತಹದು ಎಂದು ಓದುತ್ತಾ ಸಾಗಿದರೆ ಮೈ ನಡುಕ ಹುಟ್ಟುತ್ತದೆ. ಆರುನೂರು ವರ್ಷಗಳ ಹಿಂದಿನ ವಿಜಯನಗರ ಕಾಲದ ವೈಭವದ ಸನ್ನಿವೇಶವನ್ನು ಹಂಪಿ ಉತ್ಸವದಲ್ಲಿ ಧ್ವನಿ ಮತ್ತು ಬೆಳಕಿನ ಮೂಲಕ ಸಾರ್ವಜನಿಕರಿಗೆ ಮನಮುಟ್ಟುವಂತೆ ಪ್ರದರ್ಶಿಸಿದ್ದು ಈ ಬರಹವನ್ನು ಓದುತ್ತಿದ್ದ ಹಾಗೆ ನೆನಪಾಯಿತು.

—ಅನುರಾಧ ಟಿ., ದಾವಣಗೆರೆ

ಲೇಖನದಲ್ಲಿ ತಿಳಿಸಿರುವಂತೆ ‘ಗಟ್ಟಿ ಗುಂಡಿಗೆಯವರು ಮಾತ್ರ’ ಇದನ್ನು ಓದಲು ಸಾಧ್ಯ. ಮಧ್ಯಕಾಲೀನ ಯೂರೋಪ್‌ನಲ್ಲಿ ಜಾರಿಯಲ್ಲಿದ್ದ ಶಿಕ್ಷೆಗಳನ್ನು ಓದುತ್ತಿರುವಂತೆ ಮೈ ಮೇಲಿನ ಕೂದಲುಗಳು ಎದ್ದು ನಿಲ್ಲುತ್ತಿದ್ದವು. ಲೇಖನವನ್ನು ಓದಿದ ನಂತರ ರಾತ್ರಿ ನಿದ್ರಿಸಲಾಗಲಿಲ್ಲ.

—ಶ್ರೀಧರ. ಕೆ.,ಚಿಕ್ಕಬಳ್ಳಾಪುರ



### ಅರ್ಥಪೂರ್ಣ ಕಥೆ

ಸೆ. 2ರ ಸಂಚಿಕೆಯಲ್ಲಿ ಪ್ರಕಟವಾದ ಶಕ್ತಿಮೋಹನ ಶ್ರೀಮಾಲಿ ಅವರ ಎಚ್.ಎಂ. ಕುಮಾರಸ್ವಾಮಿ ಅವರು ಅನುವಾದಿಸಿದ ಕಥೆ ‘ಶರಾಬು’ ಚೆನ್ನಾಗಿ ಮೂಡಿಬಂದಿದೆ. ರೂಪಾಲಿ ಬರುವವರೆಗೆ ಪತಿ ಕಾದಿದ್ದರೆ ಕಥೆ ಪೂರ್ತಿಯಾಗುತ್ತಿತ್ತು.

—ಬಿ.ಎಸ್. ಮುಳ್ಳೂರ, ಹಲಗತ್ತಿ

### ಮೊಟ್ಟೆಯಿಂದ ಮಾನವ

ಮೊಟ್ಟೆಯಿಂದ ಮಾನವ ಆ. 24ರ ಸಂಚಿಕೆಯಲ್ಲಿ ಚೈತ್ರಿಕಾ ನಾಯ್ಕ ಹರ್ಗಿ ಅವರು ಬರೆದಿರುವ ‘ಮೊಟ್ಟೆಯಿಂದ ಮಾನವ’ ಲೇಖನ ತುಂಬ ಅರ್ಥಪೂರ್ಣವಾಗಿದೆ. ಆದರೆ ಇಂದಿನ ವೈದ್ಯರು ಗರ್ಭಧಾರಣೆ ಸಮಸ್ಯೆಗೆ ಕೇವಲ ಐವಿಎಫ್ ಒಂದೇ ಪರಿಹಾರವೆಂಬಂತೆ ಮಾತನಾಡುತ್ತಾರೆ. ನನಗೆ 30 ವರ್ಷ ಮತ್ತು ನಾನು ಸುಮಾರು ಒಂದು ವರ್ಷದಿಂದ ಗರ್ಭಧಾರಣೆಗೆ ಪ್ರಯತ್ನಪಡುತ್ತಿದ್ದೆ, ಆದರೆ ಗರ್ಭ ನಿಲ್ಲದೆ ಹೋದಾಗ ನಾನು ವೈದ್ಯರಲ್ಲಿಗೆ ಹೋದೆ. ಆಗ ಅವರು ಸಮಸ್ಯೆ ಏನನ್ನೂ ನೋಡದೆ ನೀವು ತಕ್ಷಣ ಐವಿಎಫ್ ಮಾಡಿಸಿಕೊಳ್ಳಬೇಕೆಂದರು. ಇದಕ್ಕೆ ಸುಮಾರು 4 ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದರು. ಇಂದಿನ ಕಾಲಮಾನದಲ್ಲಿ ವೈದ್ಯರು ಕೇವಲ ವ್ಯಾವಹಾರಿಕವಾಗಿ ನೋಡುತ್ತಾರೆಯೇ ವಿನಾ, ನೈಸರ್ಗಿಕವಾಗಿ ಹೇಗೆ ಪರಿಹಾರ ಕೊಡಬೇಕೆಂದು ಯೋಚಿಸುವುದಿಲ್ಲ.

—ವಸುಮತಿ ಎಂ., ರಾಮನಗರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in